# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ,ಬಿ. ಹೆಚ್. ರಸ್ತೆ, ತುಮಕೂರು-572 103 ☎:0816 - 2255650,2273511 ಫ್ಯಾಕ್ಸ್:0816-2270719

ಸಂಖ್ಯೆ:ತುವಿ:ಪವಿ:2024-25/ 1046

ದಿನಾಂಕ:04.02.2025

ಅತೀ ಜರೂರು

## : ಸುತ್ತೋಲೆ :

ವಿಷಯ : ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಅಧ್ಯಾಪಕರುಗಳು ಭಾಗವಹಿಸುವ ಕುರಿತು.

* * * * *

2025 ರ ಜನವರಿ ಮಾಹೆಯಿಂದ ಪ್ರಾರಂಭವಾಗಿರುವ ವಿವಿಧ ಸ್ನಾತಕ ಪದವಿಗಳ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ವಿಷಯಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವ ದಿನಾಂಕದಂದು ಪ್ರಾರಂಭವಾಗುತ್ತದೆ.

| ಕ್ರಮ ಸಂಖ್ಯೆ | ವಿಷಯ | ಮೌಲ್ಯಮಾಪನ ಪ್ರಾರಂಭವಾಗುವ ದಿನಾಂಕ, ವಾರ ಮತ್ತು ಸಮಯ | ಮೌಲ್ಯಮಾಪನ ನಡೆಯುವ ಕೊಠಡಿ |
|---|---|---|---|
| 01 | ಕನ್ನಡ , ಇಂಗ್ಲೀಷ್ | 14.02.2025 ಶುಕ್ರವಾರ ಬೆಳಿಗ್ಗೆ 10:00 ಘಂಟೆ | ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. |
| 02 | ಗಣಿತಶಾಸ್ತ್ರ , ಭೌತಶಾಸ್ತ್ರ , ಬಿ.ಸಿ.ಎ. & ಕಂಪ್ಯೂಟರ್ ಸೈನ್ಸ್ | 17.02.2025 ಸೋಮವಾರ ಬೆಳಿಗ್ಗೆ 10:00 ಘಂಟೆ | |
| 03 | ಬಿ.ಕಾಂ. , ಬಿ.ಬಿ.ಎ./ಬಿ.ಬಿ.ಎಂ. | 18.02.2025 ಮಂಗಳವಾರ ಬೆಳಿಗ್ಗೆ 10:00 ಘಂಟೆ | |
| 04 | ರಸಾಯನಶಾಸ್ತ್ರ, ಬಿ.ಎಸ್.ಡಬ್ಲ್ಯೂ. ಮತ್ತು ಎಲ್ಲಾ ಕಲಾ ವಿಷಯಗಳು | 24.02.2025 ಸೋಮವಾರ ಬೆಳಿಗ್ಗೆ 10:00 ಘಂಟೆ | |
| 05 | ಉಳಿದ ಎಲ್ಲಾ ವಿಷಯಗಳು | 03.03.2025 ಸೋಮವಾರ ಬೆಳಿಗ್ಗೆ 10:00 ಘಂಟೆ | |

ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಹಿತದೃಷ್ಟಿಯಿಂದ ಶೀಘ್ರವಾಗಿ ಮೌಲ್ಯಮಾಪನ ಕಾರ್ಯವನ್ನು ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ತಮ್ಮ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟ ಈ ಪತ್ರದೊಂದಿಗೆ ಲಗತ್ತಿಸಿರುವ ಸೇವಾ ಜೇಷ್ಠತಾ ಪಟ್ಟಿಯಲ್ಲಿನ ಎಲ್ಲಾ ಅರ್ಹ ಅಧ್ಯಾಪಕರುಗಳಿಗೆ (ಮೂರು ಹಾಗೂ ಮೂರಕ್ಕಿಂತ ಹೆಚ್ಚಿನ ಸೇವಾನುಭವ ಹೊಂದಿರುವ ಯು.ಜಿ.ಸಿ./ಯು.ಜಿ.ಸಿ. ಯೇತರ) ಮೌಲ್ಯಮಾಪನ ಕಾರ್ಯದಲ್ಲಿ ಕಡ್ಡಾಯವಾಗಿ ಭಾಗವಹಿಸಲು ಸೂಚಿಸುವಂತೆ ಈ ಮೂಲಕ ತಮಗೆ ತಿಳಿಸಲಾಗಿದೆ.

(ಪು.ತಿ.ನೋ.)

ವಿಶೇಷ ಸೂಚನೆ:

1. ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸದಿರುವ ಅಧ್ಯಾಪಕರುಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂಬ ವಿಷಯವನ್ನು ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಅಧೀನದಲ್ಲಿ ಬರುವಂತಹ ಎಲ್ಲಾ ಅಧ್ಯಾಪಕರುಗಳ ಗಮನಕ್ಕೆ ತರುವುದು.
2. ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ಪರೀಕ್ಷಾ ಮಂಡಳಿಯ ಅಧ್ಯಕ್ಷರುಗಳು ಮೌಲ್ಯಮಾಪಕರ ಪಟ್ಟಿ/ತಂಡಗಳ ಸಂಬಂಧ ಅನುಮೋದನೆ ಪಡೆದುಕೊಳ್ಳುವುದು.

16/2/25.

ಕುಲಸಚಿವರು(ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಪ್ರಾಂಶುಪಾಲರುಗಳು, ಘಟಕ/ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಅಧ್ಯಕ್ಷರು, ಮೇಲ್ಕಂಡ ವಿಷಯಗಳ ಪರೀಕ್ಷಾ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.